ಸಂಧ್ಯಾ ಹೆಗಡೆ ಉತ್ತರಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ದೊಡ್ಡಹೊಂಡದವರು. ಶಂಕರ ಮೊಕಾಶಿ ಪುಣೇಕರ್ ಅವರ 'ಗಂಗವ್ವ ಗಂಗಾಮಾಯಿ' ಕುರಿತು ಎಂ.ಫಿಲ್. ಹಾಗೂ 'ಆಧುನಿಕ ಕನ್ನಡ ಸಾಹಿತ್ಯ ಮೀಮಾಂಸೆ: ಕಾವ್ಯ' ಕುರಿತ ಪಿಎಚ್.ಡಿ. ಪದವಿ ಪಡೆದಿದ್ದಾರೆ. 'ಗುಲಾಬಿ ಕಚ್ಚಿನ ಬಳೆಗಳು', 'ಶಂಕರ ಮೊಕಾಶಿ ಪುಣೇಕರ್ ಅವರ 'ಗಂಗವ್ವ ಗಂಗಾಮಾಯಿ' ಹಾಗೂ 'ಎಲ್ಲರಿಗೊಳಿತನು ಬಯಸಲಿ ಕವನ' (ಕೆ.ಎಸ್. ನರಸಿಂಹಸ್ವಾಮಿಯವರ ಕಾವ್ಯ ಮೀಮಾಂಸೆ) ಪ್ರಕಟಿತ ಕೃತಿಗಳು. 'ಪ್ರಣತಿ' ಸಂಸ್ಥೆಯ ಸಂಚಾಲಕರು. ಪ್ರಸ್ತುತ, ಬೆಂಗಳೂರಿನ ಎನ್.ಎಂ.ಕೆ.ಆರ್.ವಿ. ಮಹಿಳಾ ಕಾಲೇಜಿನಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರು.

ಶಾಂತ ಧ್ಯಾನಶೀಲ ಶಿಲ್ಪಗಳೇ ಚಿತ್ರಗಳೇ ಕಾಣಿಸುವವು. ಬುದ್ಧನ ದುಃಖೋದ್ವಿಗ್ನ ಮುಖವು ಕೆತ್ತಲ್ಪಟ್ಟಿದ್ದರೆ ನಮ್ಮ ಕಲೆಯ ಸ್ವರೂಪವೇ ಬದಲಾಗುತ್ತಿತ್ತೇನೋ. ಮೈಯೇ ಕೇಂದ್ರವಾಗಿ ಉಳ್ಳ ಅದ್ಭುತವಾದ ಗ್ರೀಕ್ ಶಿಲ್ಪಕಲೆ ಕೂಡ ಪಶ್ಚಿಮದ ಕಲೆಯ ಹಿನ್ನೆಲೆಯಲ್ಲಿದೆ. ಮೈಯ ಮೇಲೆ ಅಭಿಮಾನವನ್ನು ಮೂಡಿಸುವ ಗ್ರೀಕ್ ಕಲೆ ಮತ್ತು ಮೈಯಲ್ಲಿ ಇಡಿಯಾಗಿ ನೋವನ್ನು ಅನುಭವಿಸಿದುದರ ಸೂಚನೆಯಾಗಿರುವ ಕ್ರಿಸ್ತನ ಮೂರ್ತಿ ಪಶ್ಚಿಮದ ಕಲೆಯ ಹಿನ್ನೆಲೆಯಲ್ಲಿದೆ. ಪರಂಪರೆ ಮತ್ತು ಆಧುನಿಕತೆಯನ್ನು ಹೀಗೆ ನೋಡುವುದೂ ಸಾಧ್ಯ..

ತತ್ವಜ್ಞಾನದ ಹಿನ್ನೆಲೆಯಲ್ಲಿ ನೋಡಿದರೆ; ಪಶ್ಚಿಮದಲ್ಲಿ ಸಾಕ್ರಟೀಸ್ ದೊಡ್ಡ ಹೆಸರು ಎಂದಿಟ್ಟುಕೊಳ್ಳೋಣ. ಡೆಲ್ಫಿಯ ದೇವವಾಣಿ ನನಗೆ ಕೇಳಿಸಿತು. ಅದು 'ನಿನ್ನನ್ನು ನೀನು ತಿಳಿ' (**Know Thyself**) ಎಂದು ಹೇಳಿತು, ಎಂದ ಸಾಕ್ರಟೀಸ್. ಈ ಮಾತಿನಿಂದ, ನಮ್ಮ ಬದುಕಿನಲ್ಲಿ ವಿಮರ್ಶೆಯ ಪ್ರಾಮುಖ್ಯವನ್ನು ನಾನು ಅರಿತುಕೊಂಡೆ ಎಂದಿದ್ದಾನೆ. ಅಂದರೆ, ಇದುವರೆಗೆ ನನ್ನ ಬಗ್ಗೆ ನಾನೇನು ತಿಳಿದಿರುವೆನೋ ಆ ತಿಳಿವಳಿಕೆಯಲ್ಲಿ ಕಲಬೆರಕೆಗಳು, ಹುಸಿ–ನಿಜಗಳು ಸೇರಿವೆ ಎಂದಾಯಿತು. ಕಲಬೆರಕೆಗಳನ್ನು ಬೇರ್ಪಡಿಸಿ ನಿಜವನ್ನು ಕಾಣಿಸುವುದು ವಿಮರ್ಶೆಯ ಕೆಲಸ ಎಂದಾಯಿತು. ನಮ್ಮಲ್ಲಿ ನಾವು 'ಜಿಜ್ಞಾಸಾ' ಎಂಬ ಪದವನ್ನು ಬಳಸುವೆವು. ತನ್ನ ಬದುಕಿನುದ್ದಕ್ಕೆ ಇದನ್ನು ಸಾಧಿಸಿಕೊಂಡು ಬಂದ ಮಹಾನುಭಾವ ಸಾಕ್ರಟೀಸ್. ಅವನದು ನಿಜವಾದ 'ವಿಚಾರಕ್ರಾಂತಿ'!

ಆದರೆ, 'ನಿನ್ನನ್ನು ನೀನು ತಿಳಿ' ಎಂಬ ನುಡಿಗಟ್ಟು ಪಶ್ಚಿಮದಲ್ಲಿ ಹೇಗೆ ಬೆಳೆಯಿತೆಂದರೆ, ರೆನೆ ಡೆಕಾರ್ಟ್ ಉತ್ಕಟವಾಗಿ ಉದ್ಗರಿಸಿದ್ದು ನಿಮಗೆ ಗೊತ್ತೇ ಇದೆ. '**I Think; Therefore I am**' ಎಂಬ ಉದ್ಗಾರವದು. 'ನಾನು ಇದ್ದೇನೆ, ನಾನು ಇದ್ದೇನೆ ಎಂದು ನಾನು ಅರಿಯಬಲ್ಲೆನಾಗಿ' – ಇದು ಈ ಮಾತಿನ ಇಂಗಿತ. ಇದು ಸಾಕ್ರಟೀಸ್ ಪರಂಪರೆಗೆ ರೆನೆ ಡೆಕಾರ್ಟ್ ಉತ್ತರ. 'ನಿನ್ನನ್ನು ನೀನು ತಿಳಿ' ಎಂದು ಪ್ರಾರಂಭವಾದ ಪರಂಪರೆಗೆ ಡೆಕಾರ್ಟ್ ಕೊಟ್ಟ ಉತ್ತರ. ಸಾಕ್ರಟೀಸನಿಗೆ ವಿಮರ್ಶೆಗೆ ಅತೀತವಾದುದು ಯಾವುದೂ ಇಲ್ಲ. ತಾನು ಇರುವುದೇ ಭೌತಿಕವಾಗಿ ಮುಖ್ಯವಾಗಿರುವ ಈ ಜೀವನವನ್ನೇ ಪಣವಾಗಿಟ್ಟು ಸಾಕ್ರಟೀಸ್ ವಿಚಾರ ಮಾಡಬಲ್ಲ! ಡೆಕಾರ್ಟ್‌ಗೆ 'ನಾನು ಇದ್ದೇನೆ' ಎನ್ನುವ ಅರಿವು, ಹಾಗೆಂದು ನಾನು ಚಿಂತಿಸಬಲ್ಲೆನೆನ್ನುವ ಅರಿವು ಮುಖ್ಯ. ಈ ಅರಿವನ್ನೇ ಪಣವಾಗಿಟ್ಟು ಡೆಕಾರ್ಟ್ ಮುಂದಿನ ವಿಚಾರ ಮಾಡಲಾರ. ಅಂದರೆ ಈ ಅರಿವು ತನ್ನನ್ನೇ ತಾನು ವಿಮರ್ಶಿಸಿಕೊಳ್ಳಲಾರದು. ಅಂದರೆ 'ಇರುವಿಕೆ' ಎನ್ನುವುದು ಇಲ್ಲದಿರುವಿಕೆಯ ಒಂದು ಮೈ ಎಂದು ತಿಳಿಯಲಾರದು. ಡೆಕಾರ್ಟ್‌ನನ್ನು ಒಪ್ಪಿದ ಪಶ್ಚಿಮದ ನಾಗರಿಕತೆ ತನ್ನ **Presence** ಬಗ್ಗೆ ತೀವ್ರವಾದ ಕಾಳಜಿ ಇಟ್ಟುಕೊಂಡು ಮುನ್ನಡೆದಿದೆ. ಅದರ ಪರಿಣಾಮಗಳನ್ನು ನಾವು ನೋಡುತ್ತಿದ್ದೇವೆ.

ಇನ್ನು ನಾನು ಈ ಮುನ್ನ ಹೇಳಿದ ರೂಪಾಂತರದ ಬಗ್ಗೆ ಒಂದು ಮಾತು. ಪಶ್ಚಿಮದಲ್ಲೂ ಇದು ನಡೆದಿದೆ. ಗ್ರೀಕ್ ಟ್ರ್ಯಾಜಿಡಿಗಳ ಪ್ರಭಾವ ಶೇಕ್ಸ್‌ಪಿಯರ್ ನಾಟಕಗಳ ಮೇಲೆ ಆಗಿಲ್ಲವೆ? 'ಅಂತಿಗೊನೆ' ನಾಟಕವನ್ನೂ 'ಕಿಂಗ್‌ಲಿಯರ್' ಅನ್ನೂ ಹತ್ತಿರ ಇಟ್ಟು ನೋಡಿರಿ. 'ಅಂತಿಗೊನೆ' ಕಿಂಗ್‌ಲಿರಿಗೆ ಮೂಲದಂತಿದೆ. ಇದು ಆಕ್ಷೇಪವೆತ್ತುವುದಲ್ಲ. ಸೃಷ್ಟಿಶೀಲ ಪ್ರಕ್ರಿಯೆಯೇ ಹೀಗಿದೆ ಎನ್ನುವುದಷ್ಟೇ. ಅಥವಾ ಎಲಿಯಟ್ ಹೇಳಿದ ಆ ಮಾತು, 'ಆಡುಭಾಷೆಯನ್ನು